ದೂರವಾಣಿ ಸಂಖ್ಯೆ: 080–22212343
ಫ್ಯಾಕ್ಸ್ ಸಂಖ್ಯೆ: 080–22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿಸಿ025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009)**

**ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ–2/2014–15** **ದಿನಾಂಕ:** 22 JUN 2020

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ),
ಕಂಪನಿ ಕಾರ್ಯಾಲಯ,
ಬೆಸ್ಕಾಂ, ಬೆಂಗಳೂರು/ಸೆಸ್ಕ್, ಮೈಸೂರು,
ಹೆಸ್ಕಾಂ, ಹುಬ್ಬಳ್ಳಿ/ಮೆಸ್ಕಾಂ, ಮಂಗಳೂರು/ಜೆಸ್ಕಾಂ, ಕಲಬುರಗಿ.

ಮಾನ್ಯರೆ,

ವಿಷಯ: ಶೇ.17.5 ರ ತಾಂತ್ರಿಕ ಕೋಟಾದಡಿಯಲ್ಲಿ ಬಡ್ತಿಗಾಗಿ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಪರಿಗಣಿಸುವ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ:
1. ನಿಗಮದ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ–2/2014–15, ದಿನಾಂಕ: 19.06.2015.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ–2/2014–15, ದಿನಾಂಕ: 10.05.2017.
3. ಕಾರ್ಯನಿರ್ವಾಹಕ ಕಿರಿಯ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಿ ಹೊರಡಿಸಿರುವ ನಿಗಮ ಅಧಿಕೃತ ಜ್ಞಾಪನ ಸಂಖ್ಯೆ: ಕವಿಪ್ರನಿನಿ/ಬಿ66/42866/2016–17, ದಿನಾಂಕ: 29.06.2018.
4. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿ ನೌಕರರ ಸಂಘ (ನೋಂ.ಸಂ. 659), ಬೆಂಗಳೂರು ಇವರ ಪತ್ರ ಸಂಖ್ಯೆ: ಕವಿಪ್ರನಿನೌಸಂ/147/19–20, ದಿನಾಂಕ: 01.07.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದ ದಿನಾಂಕ: 19.06.2015 ರ ಪತ್ರದಲ್ಲಿ ತಾಂತ್ರಿಕವಲ್ಲದ ಕೋಟಾದಡಿಯಲ್ಲಿನ ನೌಕರರು ಐ.ಟಿ.ಐ/ಐ.ಟಿ.ಸಿ/ತಾಂತ್ರಿಕ ವಿದ್ಯಾರ್ಹತೆ ಹೊಂದಿದ್ದರೆ/ ಹೊಂದಿದರೆ ಅಂತಹ ನೌಕರರನ್ನು ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸುವಂತೆ ತಿಳಿಸಲಾಗಿರುವುದನ್ನು, ನಿಗಮದ ದಿನಾಂಕ: 10.05.2017 ರ ಸುತ್ತೋಲೆಯಲ್ಲಿ ಹಿಂಪಡೆದು, ಐ.ಟಿ.ಐ./ಐ.ಟಿ.ಸಿ ವಿದ್ಯಾರ್ಹತೆಯ ಆಧಾರದ ಮೇರೆಗೆ ನೇರ ನೇಮಕಾತಿ ಹೊಂದಿರುವ ನೌಕರರನ್ನು ಮಾತ್ರ ಶೇ.17.5 ರ ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸಲು ತಿಳಿಸಲಾಗಿರುತ್ತದೆ.

ಐ.ಟಿ.ಐ./ಐ.ಟಿ.ಸಿ ವಿದ್ಯಾರ್ಹತೆಯನ್ನು ಹೊಂದಿದ ತಾಂತ್ರಿಕವಲ್ಲದ ಕೋಟಾದಡಿಯಲ್ಲಿನ ನೌಕರರು, ದಿನಾಂಕ: 19.06.2015 ರ ಸ್ಪಷ್ಟೀಕರಣದನ್ವಯ, ಅಕ್ಟೋಬರ್–2017 ರಲ್ಲಿ ನಡೆದ ಇಲಾಖಾ ಕಾರ್ಯನಿರ್ವಾಹಕ ಕಿರಿಯ ಪರೀಕ್ಷೆಗೆ (Executive Lower) ಹಾಜರಾಗಿದ್ದು, ಪರೀಕ್ಷಾ ಫಲಿತಾಂಶವು

ವಿಳಂಬವಾಗಿರುತ್ತದೆ. ಈ ಮಧ್ಯೆ ದಿನಾಂಕ: 10.05.2017 ರ ಸುತ್ತೋಲೆಯು ಜಾರಿಗೆ ಬಂದಿದ್ದು, ಸದರಿ ನೌಕರರನ್ನು ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸಿರುವುದಿಲ್ಲ. ಆದ್ದರಿಂದ ದಿನಾಂಕ: 29.06.2018 ರ ಫಲಿತಾಂಶದ ಅನ್ವಯ ಉತ್ತೀರ್ಣತೆಗೊಂಡಿರುವ ನೌಕರರನ್ನು **ಒಂದು ಬಾರಿಗೆ ಮಾತ್ರ** ಹಾಗೂ ಸದರಿಯವರುಗಳು ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳನ್ವಯ ನಿಗದಿಪಡಿಸಿರುವ ಕನಿಷ್ಟ ಅರ್ಹತೆ ಹಾಗೂ ಭರ್ತಿ ವಿಧಾನದಲ್ಲಿನ ಇತರೆ ಷರತ್ತುಗಳನ್ನು ಪೂರೈಸಿದ್ದಲ್ಲಿ, ಅವರನ್ನು **ಶೇ.17.5 ರ ತಾಂತ್ರಿಕ ಕೋಟಾದಡಿಯಲ್ಲಿ**, ಕಿರಿಯ ಇಂಜಿನಿಯರ್(ವಿ) ಹುದ್ದೆಯ ಬಡ್ತಿಗೆ ನಿಯಮಾನುಸಾರ ಪರಿಗಣಿಸುವಂತೆ ಈ ಮೂಲಕ ಸ್ಪಷ್ಟೀಕರಿಸಿದೆ.

**'ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ**
**ಇವರಿಂದ ಅನುಮೋದಿಸಲ್ಪಟ್ಟಿದೆ"**

**ತಮ್ಮ ವಿಶ್ವಾಸಿ,**

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಪ್ರತಿಯನ್ನು ಮಾಹಿತಿಗಾಗಿ:**

1. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಎಸ್ಕಾಂಗಳು.
2. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋಂ.ಸಂ.659), ಬೆಂಗಳೂರು.
3. ವ್ಯವಸ್ಥಾಪಕರು (ಇಲಾಖಾ ಪರೀಕ್ಷೆಗಳು), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.